# ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ

ಬೆಂಗಳೂರು ನಗರ ವಿಭಾಗ, ಜಾರಕ್‌ಬಂಡೆ ಕಾವಲ್, ಕಮ್ಮಗೊಂಡನಹಳ್ಳಿ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು 560015

# Office of the Deputy Conservator of Forests

Bangalore Urban Division, Jarakbande Kaval, Kammagondanahalli, Jalahalli West, Bengaluru 560015

ದೂರವಾಣಿ – 080-23343464 Email ID – dcfurban82@yahoo.co.in


ಸಂಖ್ಯೆ:ಎ5/ಸಿಆರ್‌ಎಫ್‌ಎಲ್/ಸಿಆರ್-23/2025-26 ದಿನಾಂಕ: 12.01.2025

ರವರಿಗೆ

ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು

ಮಾನ್ಯರೆ,

ವಿಷಯ : ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (civil) No.1164/2023 ಮತ್ತು IA No.2079/2007 and other WP (Civil) No.202/1995ರ ಪ್ರಕರಣಗಳಲ್ಲಿನ ಆದೇಶದಂತೆ ರಚಿಸಲಾಗಿರುವ ಕಂದಾಯ ವಿಭಾಗೀಯ ಮಟ್ಟದ ತಜ್ಞರ ಸಮಿತಿ ಹಾಗೂ ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡಗಳಿಗೆ ನಿಗಧಿಪಡಿಸಿರುವ ತರಬೇತಿಗೆ ಹಾಜರಾಗುವ ಕುರಿತು.

ಉಲ್ಲೇಖ :
1) ಸರ್ಕಾರದ ಆದೇಶ ಸಂಖ್ಯೆ: FEE 185 FAF 2011 ದಿನಾಂಕ: 06.03.2025
2) ಸರ್ಕಾರದ ಆದೇಶ ಸಂಖ್ಯೆ: FEE 124 FLL 2025 ದಿನಾಂಕ: 15.09.2025
3) ಸರ್ಕಾರದ ಪರಿಷ್ಕೃತ ಸಂಖ್ಯೆ: FEE 124 FLL 2025 ದಿನಾಂಕ: 16.12.2025
4) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಕಾರ್ಯಯೋಜನೆ), ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ KFD/WP/RFO/(MISC)/38/2025 ದಿನಾಂಕ: 24.112025.
5) ಸರ್ಕಾರದ ಆದೇಶ ಸಂಖ್ಯೆ: FEE 304 FLL 2025 ದಿನಾಂಕ: 30.12.2025.
6) ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ) ಬೆಂಗಳೂರು ಇವರ ಪತ್ರ ಸಂಖ್ಯೆ: ಎ11.ಭೂಮಿ.ಸಿಆರ್-38/2024-25 ದಿ: 07.01.2025.

***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (Civil) No.1164/2023ರ ದಿನಾಂಕ: 19.02.2024 ರ ಆದೇಶದನುಸಾರ ಉಲ್ಲೇಖ (1)ರಂತೆ ಕ್ರೂಢಿಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ಧಪಡಿಸಲು ಜಿಲ್ಲಾ ಮಟ್ಟದ ಸಮಿತಿ, ಕಂದಾಯ ವಿಭಾಗ ಮಟ್ಟದ ಸಮಿತಿ ಹಾಗೂ ರಾಜ್ಯ ಮಟ್ಟದ ತಜ್ಞರ ಸಮಿತಿಯನ್ನು ರಚಿಸಿ ಆಯಾ ಸಮಿತಿಗಳು ನಿರ್ವಹಿಸಬೇಕಾಗಿರುವ ಕಾರ್ಯ ವಿಧಾನವನ್ನು ನಿಗಧಿ ಪಡಿಸಲಾಗಿರುತ್ತದೆ.

ಮುಂದುವರೆದು, I.A No. 2079/2007 and other WP (Civil) No. 202/1995ರಲ್ಲಿ ದಿನಾಂಕ: 15.05.2025 ಮತ್ತು 22.05.2025 ರ ಆದೇಶದ ಅನುಸಾರ ಉಲ್ಲೇಖ (2)ರ ಸರ್ಕಾರಿ ಆದೇಶದಂತೆ ಜಿಲ್ಲಾ ಮಟ್ಟದ ಹಾಗೂ ರಾಜ್ಯಮಟ್ಟದ ವಿಶೇಷ ತನಿಖಾ ತಂಡಗಳನ್ನು ರಚಿಸಿ, ಉಲ್ಲೇಖ (3)ರ ಪರಿಷ್ಕೃತ ಸುತ್ತೋಲೆಯನ್ವಯ ಸದರಿ ತನಿಖಾ ತಂಡಗಳು ನಿರ್ವಹಿಸಬೇಕಾಗಿರುವ ಕಾರ್ಯ ವಿಧಾನ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲ್ಕಾಣಿಸಿದ ಕಂದಾಯ ವಿಭಾಗ ಮಟ್ಟದ ತಜ್ಞರ ಸಮಿತಿ ಹಾಗೂ ಜಿಲ್ಲಾ ಮಟ್ಟದ ವಿಶೇಷ ತನಿಖಾ ತಂಡವು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ತರಬೇತಿ/ಕಾರ್ಯಗಾರವನ್ನು ಕೈಗೊಳ್ಳಲು



Scanned with OKEN Scanner

ಸೂಕ್ತ ಕಾರ್ಯ ವಿಧಾನವನ್ನು ಜಾರಿಗೊಳಿಸಿ, ಆಯಾ ಸಮಿತಿಗಳ ಮತ್ತು ತಂಡಗಳ ಉಸ್ತುವಾರಿ ವಹಿಸಲು ಉಲ್ಲೇಖ(5)ರ ಸರ್ಕಾರಿ ಆದೇಶದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ವೃತ್ತ, ಬೆಂಗಳೂರು ರವರನ್ನು ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳಿಗೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ, ಆದೇಶಿಸಲಾಗಿರುತ್ತದೆ.

ಅದರಂತೆ ಉಲ್ಲೇಖ(6)ರ ಪತ್ರದಲ್ಲಿ ಸೂಚಿಸಿರುವಂತೆ ಹಾಗೂ ತಮ್ಮೊಂದಿಗೆ ಚರ್ಚಿಸಿದಂತೆ ದಿನಾಂಕ:14.01.2026ರಂದು ಪೂರ್ವಾಹ್ನ 11.00 ಗಂಟೆಗೆ ತರಬೇತಿಯನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರ ಸಭಾಂಗಣ ಕೊಠಡಿಯಲ್ಲಿ ಕೈಗೊಳ್ಳಲು ತಾವು ಸೂಚಿದ ಮೇರೆಗೆ, ಸದರಿ ತರಬೇತಿಯಲ್ಲಿ ಜಿಲ್ಲಾ ಪರಿಶೀಲನಾ ತಂಡ, ತಾಲ್ಲೂಕು ಜಂಟಿ ಪರಿಶೀಲನಾ ತಂಡ ಹಾಗೂ ಜಂಟಿ ಸರ್ವೆ ತಂಡದ ಎಲ್ಲಾ ಅಧಿಕಾರಿಗಳು ತರಬೇತಿಯಲ್ಲಿ ಹಾಜರಾಗಲು ನಿರ್ದೇಶಿಸುವಂತೆ ತಮ್ಮಲ್ಲಿ ಕೋರಿದೆ. ತಂಡಗಳ ವಿವರಗಳು ಈ ಕೆಳಕಂಡಂತಿದೆ.

**ತಾಲ್ಲೂಕು ಜಂಟಿ ಪರಿಶೀಲನಾ ತಂಡ:**

| ಕ್ರ.ಸಂ. | ಅಧಿಕಾರಿ | ಇಲಾಖೆ |
|---|---|---|
| 1 | ತಹಶೀಲ್ದಾರ | ಕಂದಾಯ |
| 2 | ತಾಲ್ಲೂಕು ಅರಣ್ಯ ವ್ಯಾಪ್ತಿಗೆ ಒಳಪಡುವ ವಲಯ ಅರಣ್ಯ ಅಧಿಕಾರಿ (ಪ್ರಾದೇಶಿಕ/ವನ್ಯಜೀವಿ) | ಅರಣ್ಯ |
| 3 | ಸಹಾಯಕ ನಿರ್ದೇಶಕರು, ಭೂದಾಖಲೆ | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು |
| 4 | ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ |

**ಜಂಟಿ ಸರ್ವೆ ತಂಡ:**

| ಕ್ರ.ಸಂ. | ಅಧಿಕಾರಿ | ಇಲಾಖೆ |
|---|---|---|
| 1 | ತಾಲ್ಲೂಕು ಕಂದಾಯ ವ್ಯಾಪ್ತಿಗೆ ಒಳಪಡುವ ಗ್ರಾಮ ಲೆಕ್ಕಿಗರು | ಕಂದಾಯ |
| 2 | ತಾಲ್ಲೂಕು ಅರಣ್ಯ ವ್ಯಾಪ್ತಿಗೆ ಒಳಪಡುವ ಉಪ ವಲಯ ಅರಣ್ಯ ಅಧಿಕಾರಿ ಮತ್ತು ಮೋಜಣಿದಾರರು (ಪ್ರಾದೇಶಿಕ /ವನ್ಯಜೀವಿ ವಿಭಾಗಗಳ ಉಸ್ತುವಾರಿ) | ಅರಣ್ಯ |
| 3 | ತಾಲ್ಲೂಕು ವ್ಯಾಪ್ತಿಗೆ ಒಳಪಡುವ ಕಂದಾಯ/ ಸಮೀಕ್ಷೆ, ವಸಾಹತು ಮತ್ತು ಭೂದಾಖಲೆ ಇಲಾಖೆಯ ಮೋಜಣಿದಾರರು | ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು |
| 4 | ತಾಲ್ಲೂಕು ವ್ಯಾಪ್ತಿಗೆ ಒಳಪಡುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ |

ತಾಲ್ಲೂಕು ಜಂಟಿ ಪರಿಶೀಲನಾ ತಂಡ ಹಾಗೂ ಜಂಟಿ ಸರ್ವೆ ತಂಡದ ಎಲ್ಲಾ ಅಧಿಕಾರಿಗಳು ತರಬೇತಿಗೆ ದಿನಾಂಕ:14.01.2026ರಂದು ಪೂರ್ವಾಹ್ನ 11.00 ಗಂಟೆಗೆ VC ಮುಖಾಂತರ ಹಾಜರಾಗುವಂತೆ ನೀರ್ದೇಶಿಸಲು ತಮ್ಮಲ್ಲಿ ಕೋರಿದೆ.

**To join the video meeting, click this link https://meet.google.com/fcp-bvtk-ueg**

ತಮ್ಮ ವಿಶ್ವಾಸಿ

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು



Scanned with OKEN Scanner

**ಪ್ರತಿಯನ್ನು ಗೌರವಗಳೊಂದಿಗೆ:**

- ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬೆಂಗಳೂರು ನಗರ ಜಿಲ್ಲೆ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸುತ್ತಾ, ತಾವು ಖುದ್ದು ಸದರಿ ತರಬೇತಿಗೆ ಹಾಜರಾಗುವಂತೆ ಹಾಗು ತಮ್ಮ ಅಧೀನ ಸಿಬ್ಬಂದಿಗಳಿಗೆ ಸದರಿ ತರಬೇತಿಗೆ VC ಮುಖಾಂತರ ಹಾಜರಾಗಲು ತಿಳಿಸುವಂತೆ ಕೋರಿದೆ.
- ಭೂದಾಖಲೆಗಳ ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸುತ್ತಾ, ತಾವು ಖುದ್ದು ಸದರಿ ತರಬೇತಿಗೆ ಹಾಜರಾಗುವಂತೆ ಹಾಗು ತಮ್ಮ ಅಧೀನ ಸಿಬ್ಬಂದಿಗಳಿಗೆ ಸದರಿ ತರಬೇತಿಗೆ VC ಮುಖಾಂತರ ಹಾಜರಾಗಲು ತಿಳಿಸುವಂತೆ ಕೋರಿದೆ.
- ಉಪ ನಿರ್ದೇಶಕರು, ಬೆಂಗಳೂರು ನಗರ ಜಿಲ್ಲೆ, ತೋಟಗಾರಿಕೆ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸುತ್ತಾ, ಸದರಿ ತರಬೇತಿಗೆ ತಾವು ಪಾಲಗೊಳ್ಳಲು ಕೋರಿದೆ.
- ಸಮಾಜ ಕಲ್ಯಾಣ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಸಂಪಂಗಿರಾಮನಗರ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸುತ್ತಾ, ಸದರಿ ತರಬೇತಿಗೆ ತಾವು ಪಾಲಗೊಳ್ಳಲು ಕೋರಿದೆ.
- ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ವೃತ್ತ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸುತ್ತಾ, ಮೇಲ್ಕಂಡ ತರಬೇತಿಗೆ ಪಾಲಗೊಳ್ಳಲು ಕೋರಿದೆ.
- ಉಪ ಅರಣ್ಯ ಸಂರಕ್ಷಣಾಧಿಕಾರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಸದರಿ ತರಬೇತಿಗೆ ತಮ್ಮ ಅಧೀನ ಸಿಬ್ಬಂದಿಗಳೊಂದಿಗೆ ಹಾಜರಾಗಲು ಸೂಚಿಸಿದೆ.
- ವಲಯ ಅರಣ್ಯಾಧಿಕಾರಿ, ಮಾಹಿತಿ ಸಂವಾಹನ ಮತ್ತು ತಂತ್ರಜ್ಞಾನ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
- ಈ ವಿಭಾಗದ ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ವಲಯ ಅರಣ್ಯಾಧಿಕಾರಿಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ನಗರ ವಿಭಾಗ, ಬೆಂಗಳೂರು

Scanned with OKEN Scanner